**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 551/2020**

| | | |
|---|---|---|
| ಸಾಕ್ಷಿಯ ಹೆಸರುಃ | ಸಹದೇವಪ್ಪ | ಫ್ರಾ.ಸಾಃ 2 |
| ತಂದೆ/ಗಂಡನ ಹೆಸರುಃ | ಚಂದಪ್ಪ | ಚಾಸಾಃ 4 |
| ವಯಸ್ಸು ಃ | 57 ವರ್ಷ | ದಿಃ 11-04-2023 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ರಾಮಸಮುದ್ರ | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ನನಗೆ ಚಾಸಾಃ 1 ರಿಂದ 3 ಮತ್ತು 5 ರಿಂದ 9 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. 2 ವರ್ಷದ ಮುಂಚೆ ಬಚ್ಚಲು ನೀರಿನ ಸಲುವಾಗಿ ನಮಗೆ ಮತ್ತು 13 ನೇ ಆರೋಪಿತನ ನಡುವೆ ಗಲಾಟೆಯಾಗಿರುತ್ತದೆ. ನಾನು ಸದರಿ ವಿಷಯದ ಸಲುವಾಗಿ ರಾಮಸಮುದ್ರ ಗ್ರಾಮ ಪಂಚಾಯಿತಿಗೆ ಅರ್ಜಿಯನ್ನು ನೀಡಿರುತ್ತೇನೆ. ಆದರೆ ಸದರಿ ಗ್ರಾಮ ಪಂಚಾಯಿತಿಯವರು ಸ್ವಚ್ಚ ಮಾಡಿರುವುದಿಲ್ಲ. ಸದರಿ ಆರೋಪಿತರು ಅಕ್ರಮಕೂಟ ರಚಿಸಿಕೊಂಡು ನನಗೆ ಏ ಸೂಳೇ ಮಗನೇ ಅಂತ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನನ್ನ ತಂದೆಯವರ ಕಾಲದಿಂದ ಇದೇ ಜಾಗದಲ್ಲಿ ಚರಂಡಿ ನೀರು ಹೋಗುತ್ತದೆ ಎಂದು ಅಂದಾಗ ನನಗೆ ಮತ್ತು ಚಾಸಾಃ 5 ರವರಿಗೆ ಮತ್ತು 6 ರವರಿಗೆ ಆರೋಪಿತರು ಹೊಡೆದಿರುತ್ತಾರೆ. ಸದರಿ ಆರೋಪಿತರು ನಮ್ಮನ್ನು ಮುಗಿಸಿಬಿಡುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. 2 ನೇ ಆರೋಪಿತನು ನನಗೆ ಕಲ್ಲಿನಿಂದ ಎದೆಗೆ ಹೊಡೆದಿರುತ್ತಾನೆ. ನಂತರ ನಾನು ಮತ್ತು ಚಾಸಾಃ 5 ಮತ್ತು ಚಾಸಾಃ 6 ಮತ್ತು ಚಾಸಾಃ 1 ರವರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿರುತ್ತೇವೆ. ನಂತರ ಮರುದಿನ ಚಾಸಾಃ 1 ರವರು ಆರೋಪಿತರ ವಿರುದ್ದ ದೂರನ್ನು ದಾಖಲಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸಹಾಯಕ ಸರಕಾರಿ ಅಭೀಯೋಜಕರು ಪಾಟಿ ಸವಾಲಿಗಾಗಿ ಅನುಮತಿಯನ್ನು ಕೋರಿದ್ದು ನ್ಯಾಯಾಲಯದ ಮುಂದೆ ಇರುವ ದಾಖಲಾತಿಯನ್ನು ಪರಿಶೀಲಿಸಿ ಅನುಮತಿಯನ್ನು ನೀಡಲಾಯಿತು.)**

ಸದರಿ 2, 5, 8, 12 ನೇ ಆರೋಪಿತರು ಚಾಸಾಃ 5 ರವರಿಗೆ ಬಡಿಗೆ ಕಟ್ಟಿಗೆಯಿಂದ ಕಾಲಿಗೆ ಮತ್ತು ಬೆನ್ನಿಗೆ, ಎಡರಟ್ಟೆಗೆ ಹೊಡೆದಿರುತ್ತಾರೆ ಎಂದರೆ ಸರಿ. ಸದರಿ ಬಡಿಗೆಗಳನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ಮು. ಮಾ. 1 ರಿಂದ 3 ಎಂದು ಗುರುತಿಸಲಾಗಿದೆ. 4, 5, 10, 11 ನೇ ಆರೋಪಿತರು ಚಾಸಾಃ 6 ರವರಿಗೆ ಕೈ ಮುಷ್ಟಿ ಮಾಡಿ ಹೊಟ್ಟೆಗೆ ಮತ್ತು ಬೆನ್ನಿಗೆ ಹೊಡೆದು ನೆಲಕ್ಕೆ ಹಾಕಿ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿ. ಸದರಿ ಆರೋಪಿತರು ನನಗೆ ಮತ್ತು ಚಾಸಾಃ 5, 6 ರವರಿಗೆ ಒದಿಯುತ್ತಿದ್ದರು ಎಂದರೆ ಸರಿ. ಸದರಿ ಚಾಸಾಃ 1 ರವರು ಜಗಳವನ್ನು ಬಿಡಿಸಲು ಬಂದಾಗ 7 ಮತ್ತು 14 ನೇ ಆರೋಪಿತರು ಕೈಯಿಂದ ಹೊಡೆದಿರುತ್ತಾರೆ ಎಂದರೆ ಸರಿ. ಸದರಿ ಜಗಳವನ್ನು ಚಾಸಾಃ 7, 8, 9 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**<u>ಪಾಟಿ ಸವಾಲುಃ ಆರೋಪಿತರ ಪರ ವಕೀಲರು ಶ್ರೀ ಕೆ ಬಿ ಇವರಿಂದ.</u>**

ಸದರಿ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯವು ಮತ್ತು ಸರಕಾರಿ ವಕೀಲರು ಭಾಗಶಃ ಪಾಟಿ ಸವಾಲಿನಲ್ಲಿ ಹೇಳಿದ ಸಂಗತಿಗಳು ಸುಳ್ಳು ಇದೆ ಎಂದರೆ ಸರಿಯಲ್ಲ. ನಾನು ಚರಂಡಿಯನ್ನು ಸ್ವಚ್ಛ ಮಾಡಲು ಗ್ರಾಮ ಪಂಚಾಯಿತಿಗೆ ಅರ್ಜಿ ಕೊಟ್ಟಿರುತ್ತೇನೆ ಎಂದು ಮೊದಲನೆ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರಸ್ತೆಯ ಎರಡೂ ಬದಿಯಲ್ಲಿ ಮೋರಿ ಇದೆ ಎಂದರೆ ಸರಿಯಲ್ಲ. ನನ್ನ ಮತ್ತು 13 ನೇ ಮತ್ತು 14 ನೇ ಆರೋಪಿತನ ಮನೆ ಅಕ್ಕ-ಪಕ್ಕದಲ್ಲಿ ಇದೆ ಎಂದರೆ ಸರಿ. ಸದರಿ 1 ರಿಂದ 12 ನೇ ಆರೋಪಿತರ ಮನೆಗಳು ನಮ್ಮ ಮನೆಯಿಂದ ಬಹಳ ದೂರ ಇದೆ ಎಂದರೆ ಸರಿ. ಸದರಿ 1 ರಿಂದ 7 ನೇ ಆರೋಪಿತರು ಒಂದೇ ಕುಟುಂಬದವರು ಎಂದರೆ ಸರಿ. ಆರೋಪಿ ನಂಬರ 8 ರಿಂದ 14 ರವರು 1 ರಿಂದ 7 ನೇ ಆರೋಪಿತರವರ ಸಂಬಂಧಿಕರು ಎಂದರೆ ಸರಿ. ಸದರಿ 13 ಮತ್ತು 14 ನೇ ಆರೋಪಿತರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಅವರ ಜಾಗ ರಾಮಸಮುದ್ರದಲ್ಲಿ ಅಂದರೆ ನಮ್ಮ ಮನೆಯ ಪಕ್ಕದಲ್ಲಿ ಖಾಲಿ ಇತ್ತು ಎಂದರೆ ಸರಿ. ಸದರಿ 13 ಮತ್ತು 14 ನೇ ಆರೋಪಿತರು ಖಾಲಿ ಜಾಗದಲ್ಲಿ ಮನೆ ಕಟ್ಟಿಕೊಂಡು ಅಲ್ಲಿಯೇ ವಾಸಿಸಲು ಪ್ರಾರಂಭಿಸಿದರು ಎಂದರೆ ಸರಿ. ಸದರಿ 13 ಮತ್ತು 14 ನೇ ಆರೋಪಿತರು ಚರಂಡಿಯಲ್ಲಿ ನೀರನ್ನು ಬಿಡಿ ನಮ್ಮ ಮನೆಯ ಕಡೆ ಬಿಡಬೇಡಿ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು ತಾನು ತನ್ನ ತಂದೆಯ ಕಾಲದಿಂದ ಅಲ್ಲಿಯೇ ನೀರು ಹೋಗುತ್ತದೆ ಅದಕ್ಕೆ ನಾನು ಅಲ್ಲಿಯೇ

ನೀರು ಬಿಡುತ್ತೇನೆ ಎಂದು ಹೇಳಿರುತ್ತಾರೆ. ಸದರಿ ಖಾಲಿ ಜಾಗದಲ್ಲಿ ಮನೆ ಕಟ್ಟುವುದಿದೆ ನೀರು ಬಿಡಬೇಡಿ ಎಂದು 13 ಮತ್ತು 14 ನೇ ಆರೋಪಿತರು ಅಂದಾಗ ಸಾಕ್ಷಿಯು ಮೂರು ಫಿಟ್ ಜಾಗ ಅಲ್ಲಿಯೇ ಇದೆ ಎಂದು ನುಡಿಯುತ್ತಾರೆ. ಸದರಿ ಸಿಸಿ ರಸ್ತೆಯ ಪಕ್ಕದಲ್ಲಿ ಎರಡೂ ಬದಿಯಲ್ಲಿ ಚರಂಡಿ ಇದ್ದು ಅದರಲ್ಲಿ ನೀರು ಬಿಡಲು 13 ಮತ್ತು 14 ನೇ ಆರೋಪಿತರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಮೋರಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸಿಸಿ ರಸ್ತೆಯನ್ನು ಮಾಡುವಾಗ ಎರಡೂ ಬದಿಯಲ್ಲಿ ಚರಂಡಿ ಮಾಡಿ ರಸ್ತೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಚರಂಡಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮೋರಿಯ ಮೇಲೆ ನಾನು ಶೌಚಾಲಯ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಶೌಚಾಲಯದ ನೀರನ್ನು ತಡೆಗಟ್ಟಿದ್ದರಿಂದ ನಾನು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಮತ್ತು ಚಾಸಾಃ 1, 4, 5, 6 ರವರ ಜೊತೆ ಜಗಳ ಮಾಡದಿದ್ದರೂ ಕೂಡ ಮತ್ತು ಹೊಡೆಯದಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 6 ನೇ ಆರೋಪಿತಳು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಇದ್ದಳು ಎಂದರೆ ಸರಿ. ಆರೋಪಿತರು ನಮಗೆ ಸಂಬಂಧಿಕರು ಆಗಬೇಕು ಎಂದರೆ ಸರಿ. 2 ನೇ ಆರೋಪಿತನ ಜೊತೆ ನನ್ನ ಅಣ್ಣನ ಮಗಳ ಹೆಸರು ನಿರ್ಮಲ ಜೊತೆ ಪ್ರೇಮ ವಿವಾಹವಾಗಿರುತ್ತದೆ ಎಂದರೆ ಸರಿ. ಸದರಿ ವಿಷಯದ ಬಗ್ಗೆ ನಾವು ತಡೆದಿರುವುದಿಲ್ಲ. ಸದರಿ ಆರೋಪಿತನ ಜೊತೆಗೆ ಆ ವಿಷಯವಾಗಿ ನಮ್ಮ ನಡುವೆ ವೈಮನಸ್ಸು ಇದೆ ಎಂದರೆ ಸರಿಯಲ್ಲ. 1 ನೇ ಆರೋಪಿತನು ವೃದ್ಧ ಮನುಷ್ಯ ಇರುವುದರಿಂದ ಅವನಿಗೆ ನಡೆಯಲು ಮತ್ತು ಊಟ ಮಾಡಲು ಆಗುವುದಿಲ್ಲ ಎಂದರೆ ಸಾಕ್ಷಿಯು ಕೈ ನಡುಗುತ್ತವೆ ಎಂದು ನುಡಿಯುತ್ತಾರೆ. 1 ನೇ ಆರೋಪಿತನು ಮನೆಯಲ್ಲಿಯೇ ಇರುತ್ತಾನೆ ಎಂದರೆ ಸರಿಯಲ್ಲ.

ಸದರಿ ಬಡಿಗೆಗಳು ಎಷ್ಟು ಉದ್ದ ಇದ್ದವು ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಮು. ಮಾ. 1 ರಿಂದ 3 ಇವೆ ಇದ್ದವು ಎಂದು ನುಡಿಯುತ್ತಾರೆ. ಸದರಿ ಮು.ಮಾ. 1 ರಿಂದ 3 ಕಟ್ಟಿಗೆಯಲ್ಲ ಒಲೆಯಲ್ಲಿ ಹಾಕುವ ಕಟ್ಟಿಗೆಗಳು ಇವೆ ಎಂದರೆ ಸಾಕ್ಷಿಯು ಇವೆ ಕಟ್ಟಿಗೆಯಿಂದ ಆರೋಪಿತರು ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮ. ಮಾ. 1 ರಿಂದ 3 ರೈತರ ಕುಟುಂಬದಲ್ಲಿ ಸಿಗುತ್ತದೆ ಎಂದರೆ ಸರಿ. ಸದರಿ ಮು. ಮಾ. 1 ರಿಂದ 3 ಜಗಳಕ್ಕೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸದರಿ ನಮ್ಮ ಮತ್ತು 13 ಮತ್ತು 14 ನೇ ಆರೋಪಿತರ ನಡುವೆ ಇರುವ ಜಗಳವನ್ನು ಪರಿಶೀಲನೆ ಮಾಡಲು 6 ನೇ ಆರೋಪಿತನು, ಗಾಲಿಂ ಸಾಬ, ಬಾಬು ಗೌಡ, ಬಸವರಾಜ ಇವರನ್ನು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಗಳು ನನ್ನ ತಪ್ಪು ಇದೆ ಎಂದು ಬುದ್ದಿವಾದ ಹೇಳಿ ಬಂದಿರುತ್ತಾರೆ ಎಂದರೆ ಸರಿಯಲ್ಲ. ದೂರನ್ನು ನೀಡಲು ಚಾಸಾಃ 1 ರವರು ಹೋಗಿರುತ್ತಾರೆ.

**ಮುಂದುವರೆದ ಪಾಟಿ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

**ಮರು ವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**